ಬರೆಯುವ ಬಿದಿರಿನಿಂದ ತಯಾರಿಸಿದ ರೀಡ್ ಪೆನ್ ಉಪಯೋಗಿಸುತ್ತಿದ್ದಿರಬೇಕು. ಆ ಸಂದರ್ಭದಲ್ಲಿ ಅವರು ತಮ್ಮ ಒಡನಾಡಿ ಆಂಧ್ರದ ಪಟ್ಟಾಭಿ ಸೀತಾರಾಮಯ್ಯ ಅವರಿಗೆ ಬರೆದ ಪತ್ರದ ಒಕ್ಕಣೆ ಹೀಗಿದೆ: 'ಆತ್ಮೀಯ ಡಾ. ಪಟ್ಟಾಭಿ, ಹಳ್ಳಿಯಲ್ಲಿ ತಯಾರಿಸಿದ ಹಾಳೆಯಲ್ಲಿ, ಹಳ್ಳಿಯಲ್ಲಿ ತಯಾರಿಸಿದ ಶಾಯಿಯಲ್ಲಿ ಮತ್ತು ಹಳ್ಳಿಯಲ್ಲೇ ತಯಾರಿಸಿದ ಬಿದಿರಿನ ಪೆನ್ನಿನಲ್ಲಿ ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ'.

ನೌಕಾಲಿಯಲ್ಲಿ (1946ರ ಡಿ. 27) ಜವಾಹರಲಾಲ್ ನೆಹರು ಅವರು ಗಾಂಧೀಜಿಯನ್ನು ಭೇಟಿಯಾದಾಗ ಫೌಂಟನ್ ಪೆನ್ನನ್ನು ಉಡುಗೊರೆಯಾಗಿ ನೀಡಿದ್ದರು. ಅಕಸ್ಮಾತ್ ಅದ್ಯಾವ ಕಂಪನಿಯದ್ದು ಎಂದು ಗೊತ್ತಾಗಿದ್ದಿದ್ದರೆ, ಆ ಕಂಪನಿಯವರು, 'ಬಾಪು ನಮ್ಮ ಕಂಪನಿ ಪೆನ್ನಿನಲ್ಲೇ ಬರೆಯುತ್ತಿದ್ದರು' ಎಂದು ಜಾಹೀರಾತು ಕೊಡುತ್ತಿದ್ದರೇನೋ. ಗಾಂಧೀಜಿಗೆ ಇದು ಇಷ್ಟವಾಗುತ್ತಿರಲಿಲ್ಲ. ಒಮ್ಮೆ ಸೂರಿಗೆ ಹಾಕುವ ಹೆಂಚಿನ ಕಂಪನಿಯವರು ಬಾಪು ಚಿತ್ರವನ್ನು ಹೆಂಚಿನ ಮೇಲೆ ಅಳವಡಿಸಲು ಅನುಮತಿ ಕೋರಿದರು. 'ನನ್ನ ಚಿತ್ರಗಳ ಮೇಲೆ ನನಗೆ ಯಾವುದೇ ರೀತಿಯ ಹಕ್ಕುಸ್ವಾಮ್ಯಗಳಿಲ್ಲ. ಆದರೂ, ನೀವು ಕೋರಿದ್ದಕ್ಕೆ ನಾನು ಒಪ್ಪಿಗೆ ಕೊಡಲಾರೆ' ಎಂದು ಉತ್ತರಿಸಿದ್ದರು.



ಗಾಂಧೀಜಿಯ ಬರವಣಿಗೆಯ ಶಕ್ತಿಯನ್ನು ಚಿತ್ರಿಸಿರುವ ಎಂ.ಎಸ್. ಮೂರ್ತಿ ಅವರ ಕಲಾಕೃತಿ

## ಸ್ವದೇಶಿ ಪೆನ್ನು

2019ರ ನವೆಂಬರ್‌ನಲ್ಲಿ ಜರ್ಮನ್ ಚಾನ್ಸಲರ್ ಏಂಜೆಲಾ ಮರ್ಕೆಲ್ ಭಾರತಕ್ಕೆ ಭೇಟಿ ನೀಡಿದ್ದಾಗ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ರತ್ನಂ ಕಂಪನಿಯ ಫೌಂಟನ್ ಪೆನ್ ಉಡುಗೊರೆಯಾಗಿ ನೀಡಿದ್ದರು. ಈ ರತ್ನಂ ಪೆನ್ ಎಂಬ ಸ್ವದೇಶಿ ಪೆನ್ನಿನ ತಯಾರಿಕೆಗೆ ಗಾಂಧೀಜಿಯವರೇ ಪ್ರೇರಣೆ.

ಆಂಧ್ರದ ರಾಜಮಂಡ್ರಿಯ ಒಂದು ಪುರಾತನ ಮನೆಯಲ್ಲಿ ಈ ಪೆನ್ನು ತಯಾರಾಗುತ್ತದೆ. 'ಕೆ. ವಿ. ರತ್ನಂ ಮತ್ತು ಮಕ್ಕಳು, 1932ರಿಂದ ಪೆನ್ ತಯಾರಿಕೆಯಲ್ಲಿ ಸಿದ್ಧಹಸ್ತರು. ಸ್ವದೇಶಿ 'ರತ್ನಮ್ ಸನ್' ಪೆನ್ನುಗಳು: 14 ಕ್ಯಾರೆಟ್ ನಿಬ್' ಎಂಬ ಫಲಕವನ್ನು ನಾವು ಅಲ್ಲಿ ಕಾಣಬಹುದು. ಗಾಂಧೀಜಿಯವರ ಸ್ವದೇಶಿ ಆಂದೋಲನದ ನೈಜ ರೂಪಕ ರತ್ನಂರವರ ಸ್ವದೇಶಿ ಪೆನ್ನು.

ರತ್ನಂ ಪೆನ್ನು ಹಲವು ಪ್ರಸಿದ್ಧರ ಮನದಾಳದ ಮಾತಿಗೆ ಅಕ್ಷರ ರೂಪ ನೀಡಿದೆ. ಗಾಂಧೀಜಿ, ಜವಾಹರಲಾಲ್ ನೆಹರು, ರಾಜೇಂದ್ರ ಪ್ರಸಾದ್, ರಾಧಾಕೃಷ್ಣನ್, ಇಂದಿರಾ ಗಾಂಧಿ, ಫಕ್ರುದ್ದೀನ್ ಅಲಿ ಅಹಮದ್, ಜಾಕೀರ್ ಹುಸೇನ್, ವಿ.ವಿ. ಗಿರಿ, ನೀಲಂ ಸಂಜೀವರೆಡ್ಡಿ, ಶಂಕರ್ ದಯಾಳ್ ಶರ್ಮ, ರಾಜೀವ್ ಗಾಂಧಿ, ಗುಲ್ಜಾರಿಲಾಲ್ ನಂದಾ, ಅಮೆರಿಕ ಅಧ್ಯಕ್ಷ ಐಸನ್ ಹೋವರ್, ರಷ್ಯಾದ ಕ್ರುಶ್ಚೇವ್, ಮೈಸೂರು ಮಹಾರಾಜರು ಸೇರಿದಂತೆ ಹಲವರು ರತ್ನಂ ಪೆನ್ನನ್ನು ಹೊಂದಿದ್ದರು.

1921ರಲ್ಲಿ ಅಕ್ಕಸಾಲಿಗ ಕುಟುಂಬದ ಹಿನ್ನೆಲೆಯ ಕೆ.ವಿ. ರತ್ನಂ ಅವರು ಭೇಟಿಯಾದಾಗ, ಸ್ವದೇಶಿ ವಸ್ತುಗಳನ್ನು ತಯಾರಿಸುವಂತೆ ಗಾಂಧೀಜಿ ಪ್ರೋತ್ಸಾಹಿಸಿದರು. ಆಗ ಅವರು, 'ಯಾವ ವಸ್ತುವನ್ನು ನಾನು ತಯಾರಿಸಲಿ' ಎಂದು ಕೇಳಿದರು. 'ಪಿನ್‌ನಿಂದ ಪೆನ್‌ವರೆಗೂ ಏನು ಸಾಧ್ಯವೋ ಅದನ್ನು ತಯಾರಿಸಿ' ಅಂದರಂತೆ ಗಾಂಧಿ. ಆಗ ಹುಟ್ಟಿದ್ದೇ ಸ್ವದೇಶಿ ರತ್ನಂ ಪೆನ್. ಫೌಂಟನ್ ಪೆನ್ ಹೇಗೆ ಕೆಲಸ ಮಾಡುತ್ತದೆಂದು ಅಭ್ಯಸಿಸಿದ ರತ್ನಂ, 14 ಕ್ಯಾರೆಟ್ ಬಂಗಾರದ ನಿಬ್ ತಯಾರಿಸಿದರು. 1934ರಲ್ಲಿ, ಸಂಪೂರ್ಣವಾಗಿ ಸ್ವದೇಶಿ ವಸ್ತುಗಳನ್ನೇ ಬಳಸಿ ತಯಾರಿಸಿದ ಫೌಂಟನ್ ಪೆನ್ನನ್ನು 'ಅಖಿಲ ಭಾರತ ಗೃಹಕೈಗಾರಿಕೆಗಳ ಸಂಘ'ದ ಜೆ.ಸಿ. ಕುಮಾರಪ್ಪ ಅವರ ಮೂಲಕ ಗಾಂಧೀಜಿಗೆ ಕಳುಹಿಸಿಕೊಟ್ಟರು.

ಗಾಂಧೀಜಿ, ಆ ಪೆನ್ನಿನಲ್ಲೇ ಅವರಿಗೆ ಪತ್ರ ಬರೆದರು: 'ಪ್ರೀತಿಯ ರತ್ನಂ, ನೀವು ಕಳಿಸಿದ ಫೌಂಟನ್ ಪೆನ್ನಿಗಾಗಿ ಧನ್ಯವಾದಗಳು. ಇದು ನನಗೆ ಅತ್ಯವಶ್ಯಕವಾಗಿತ್ತು. ಇದನ್ನು ನಾನು ಉಪಯೋಗಿಸುತ್ತಿರುವೆ. ಬಜಾರಿನಲ್ಲಿ ಸಿಗುವ ವಿದೇಶಿ ಪೆನ್ನುಗಳ ಬದಲಿಯಾಗಿ ನಿಮ್ಮ ಪೆನ್ನನ್ನೇ ಬಳಸಬಹುದು'. ರತ್ನಂ ಅವರ ಮೊಮ್ಮಕ್ಕಳು ಈಗಲೂ ಪೆನ್ನುಗಳನ್ನು ತಯಾರಿಸುತ್ತಿದ್ದು, ಗಾಂಧೀಜಿಯ ಈ ಪತ್ರದ ನಕಲು ಪ್ರತಿಯನ್ನು ರತ್ನಂ



ಪೆನ್ನಿನ ನಿಬ್ಬಿನಲ್ಲಿ ಗಾಂಧೀಜಿ